**ದಿ: 22-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು: ಶ್ರೀ ಬಿ ಹೆಚ್ ವಕೀಲರಿಂದ :-**

1. ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಂತಹ ವಿಷಯಗಳ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ನನಗೆ ಸಾಕ್ಷಿ ನುಡಿಯಲು ಹೇಳಿರುತ್ತಾರೆ ಎಂದರೆ ಸರಿ. ದಾವೆ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಊರು ನಗರಗುಂಡ ಆಗಿರುತ್ತದೆ. ದಾವಾ ಹೊಲದ ಸ ನಂ 133 ಆಗಿರುತ್ತದೆ ವಿಸ್ತೀರ್ಣ 02 ಎಕರೆ 31 ಗುಂಟೆ ಜಮೀನಿಗೆ ದಾವೆಯನ್ನು ಸಲ್ಲಿಸಿರುತ್ತಾರೆ. ದಾವೆಯನ್ನು ವಾದಿ ಬಂದಮ್ಮ ಇವರು ಜುಬಲೇಸಾಬ ಮೇಲೆ ಹೊಲ ನನ್ನದು ಎಂದು ಸಲ್ಲಿಸಿರುತ್ತಾರೆ. ಸ ನಂ 133 ರ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸ ನಂ 133 ರಲ್ಲಿ ಪ್ರತಿವಾದಿಗೆ ಹೊಲ ಇದೆಯೋ ಇಲ್ಲವೋ ಎಂದರೆ ಸಾಕ್ಷಿಯು ವಾದಿಯ ಹೊಲ ಇದೆ ಪ್ರತಿವಾದಿಯ ಹೊಲ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಎನ್ನುತ್ತಾರೆ.

2. ವಾದಿಗೆ ದಾವಾ ಹೊಲ ಸ ನಂ 133, ವಿಸ್ತೀರ್ಣ 02 ಎಕರೆ 31 ಗುಂಟೆ ಅವರ ತಾತನಿಂದ ಬಂದಿರುತ್ತದೆ. ವಾದಿಯ ತಂದೆಯ ಹೆಸರು ಖಾಸಿಂಸಾಬ, ವಾದಿಯ ತಾತನ ಹೆಸರು ಹುಸೇನಸಾಬ. ಹುಸೇನಸಾಬ ರವರಿಗೆ 6 ಜನ ಮಕ್ಕಳಿರುತ್ತಾರೆ. ಆ 6 ಜನ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಹುಸೇನಸಾಬರವರಿಗೆ 6 ಜನ ಮಕ್ಕಳು ಇರುತ್ತಾರೆ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ನನಗೆ ಗೊತ್ತಿಲ್ಲ. 1ನೇ ವಾದಿಯ ತಾಯಿಯ ಹೆಸರು ನನಗೆ ನೆನಪಿಲ್ಲ. ಪ್ರತಿವಾದಿ ಬಡೇಸಾಬ ರವರ ಮಗನಾಗಿರುತ್ತಾನೆ. ಬಡೇಸಾಬರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಬಡೇಸಾಬ ಇವರಿಗೆ 03 ಜನ ಅಣ್ಣ ತಮ್ಮಂದಿರು ಇರುತ್ತಾರೆ. ಪ್ರತಿವಾದಿಯ ತಮದೆ ಬಡೇಸಾಬ ಇವರ ತಂದೆಯ ಹೆಸರು ಸಣ್ಣ ಸೋಪಣ್ಣ ಅಂತಾ ಇದ್ದು ಅವರಿಗೆ ಪೀರಮೋದಿನ, ಬಡೇಸಾಬ ಮತ್ತು ಹುಸೇನಸಾಬ ಅಂತಾ ಇರುತ್ತಾರೆ ಎಂದರೆ ಸರಿ. ಬಡೇಸಾಬ ರವರಿಗೆ ಕತಲ್‌ಸಾಬ, ಕತಲಮ್ಮ ಮತ್ತು ಜುಬಲೇಸಾಬ ಅಂತಾ 03 ಜನ ಮಕ್ಕಳಿರುತ್ತಾರೆ ಎಂದರೆ ಸರಿ. ಪ್ರತಿವಾದಿಯ ದೊಡ್ಡಪ್ಪನ ಮಗ ಸೋಫಿಸಾಬ ಎಂಬುವವರು ಇದ್ದಾರೆ ಎಂದರೆ ಸರಿ. ಪ್ರತಿವಾದಿಯ ದೊಡ್ಡಪ್ಪ ಹುಸೇನಸಾಬ ರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸಾಕ್ಷಿಯು ಹೌದು ಹೆಂಡತಿಯು ಇದ್ದಳು ಅವರು ತೀರಿಕೊಂಡಿರುತ್ತಾರೆ ಎನ್ನುತ್ತಾರೆ.

3. ಹಳೆ ಸ ನಂ ಸ ನಂ 133/4, 02 ಎಕರೆ 08 ಗುಂಟೆ ಈಗ ಹೊಸ ಸ ನಂ 133/8, 02 ಎಕರೆ 08 ಗುಂಟೆ ಆಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ 02 ಎಕರೆ 30 ಗುಂಟೆ ಜಮೀನಿನ ಬಗ್ಗೆ ಗೊತ್ತಿದೆ ಎನ್ನುತ್ತಾರೆ. ಹಳೆ ಸ ನಂ ಸ ನಂ 133/3, 02 ಎಕರೆ 31 ಗುಂಟೆ ಈಗ ಹೊಸ ಸ ನಂ 133/4, 02 ಎಕರೆ

31 ಗುಂಟೆ ಆಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ 02 ಎಕರೆ 30 ಗುಂಟೆ ಜಮೀನಿನ ಬಗ್ಗೆ ಗೊತ್ತಿದೆ ಎನ್ನುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀಸವಾಲಿಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ